

# ಡೇರೆ

## ಚೆಲುವೆಲ್ಲ ನಂದೆಂದಿತು...

**ಮಳೆಗಾಲದ ಚೆಲುವನ್ನು ಹೆಚ್ಚಿಸುವಂತೆ ಡೇರೆ ಹೂಗಳು ಅರಳಿ ನಿಲ್ಲುವ ದಿನಗಳಿವು. ಮೆಕ್ಸಿಕೋ ದೇಶದ ರಾಷ್ಟ್ರೀಯ ಪುಷ್ಪವಾದ ಡೇರೆ, ನಮ್ಮ ನೆಲದಲ್ಲೂ ಸ್ಥಾನ ಪಡೆದಿದೆ, ಪೇಟೆಯಲ್ಲಿ ಬೇಡಿಕೆ ಕಂಡುಕೊಂಡಿದೆ.**



**■ ಗಣಪತಿ ಹಾಸ್ಪುರ**



ಮಳೆಗಾಲ ಹೂಗಿಡಗಳ ಪಾಲಿಗೆ ಸುಗ್ಗಿಯ ಸಮಯ. ಮಳೆಯ ಕರುಣೆ, ಅಮೃತಗುಣವೆಲ್ಲ ಹೂಗಳ ರೂಪದಲ್ಲಿ ಗಿಡ–ಬಳ್ಳಿಗಳಲ್ಲಿ ಮೂಡಿ ನಗುವಂತೆ ಕಾಣಿಸುತ್ತದೆ. ಮಲೆನಾಡಿನಲ್ಲಂತೂ ಹೂಗಳ ಪರಿಷೆಯೇ ಪ್ರಕೃತಿಯಲ್ಲಿ ನಡೆದಂತೆ ಕಾಣಿಸುತ್ತದೆ. ಕೃಷಿಕರ ಮನೆ ಅಂಗಳಗಳು ಪುಷ್ಪ ಪ್ರದರ್ಶನದ ವೇದಿಕೆಗಳ ರೂಪದಲ್ಲಿ ಕಂಗೊಳಿಸುತ್ತವೆ. ಇಂಥ ಚಂದದ ಹೂಗಳಲ್ಲಿ – ಡೇರೆ, ಜೀನಿಯಾ, ಸೋಣೆ, ನಾಗದಾಳಿ ಪ್ರಮುಖವಾದವು. ಅದರಲ್ಲೂ ಡೇರೆ ಹೂಗಳಂತೂ ಬಣ್ಣ ಹಾಗೂ ಚೆಲುವಿನ ಕಾರಣದಿಂದ ಹೂಗಳ ನಡುವೆ ಎದ್ದುಕಾಣುತ್ತವೆ.

ಡೇರೆ ಎನ್ನುವುದು ಈ ನೆಲದ ಹೂವೇನಲ್ಲ. ಅದು ವಿದೇಶಿಯರ ಕೊಡುಗೆ. ಮೆಕ್ಸಿಕೋ ಮೂಲಕ ಈ ಹೂವು 'ಡಾಲಿಯಾ ಮೇರಿಯಾ ಬಿಲಿಸ್ ಕಾಂಪೋಸಿಟ್' ಎಂಬ ವರ್ಗಕ್ಕೆ ಸೇರಿದ್ದು. ಯೂರೋಪ್ ದೇಶಗಳಲ್ಲಿ ಪ್ರಸಿದ್ಧಿಯಾಗಿರುವ 'ಡೇರೆ ಹೂ' ಮೆಕ್ಸಿಕೋ ದೇಶದ ರಾಷ್ಟ್ರೀಯ ಪುಷ್ಪವೂ ಹೌದು.

ಮಲೆನಾಡಿನ ಹವಾಮಾನಕ್ಕೆ ಡೇರೆ ತುಂಬಾ ಸುಲಭವಾಗಿ ಒಗ್ಗಿಕೊಂಡಿದೆ. ಆ ಕಾರಣದಿಂದಲೇ ಅದು ಕೃಷಿಕರ ಮನೆ ಅಂಗಳದ ಮಳೆಗಾಲದ ಕಾಯಂ ಅತಿಥಿ! ಡೇರೆ ಒಂದು ಗಿಡದಲ್ಲಿ ಸುಮಾರು 4ರಿಂದ 15 ಹೂಗಳನ್ನು ಬಿಡುವ ಸಾಮರ್ಥ್ಯ ಹೊಂದಿದೆ. ಈ ಹೂ ಗಿಡದಲ್ಲಿಯೇ ಇದ್ದರೆ, ಏಳೆಂಟು ದಿನಗಳ ಕಾಲ ತಾಜಾತನದಿಂದ ಕಂಗೊಳಿಸುತ್ತದೆ.

ಮಲೆನಾಡಿನಲ್ಲಿ 'ಡೇರೆ ಹೂ'ಗಳನ್ನು ಹೆಚ್ಚಾಗಿ ಪೂಜೆಗೆ ಬಳಸುತ್ತಾರೆ. ಮನೆ ಅಂಗಳದಲ್ಲಿ ಅರಳಿದ ಡೇರೆ ಹೂಗಳನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಗ್ರಾಮೀಣ ಪ್ರದೇಶದ ಕೆಲ ಹೆಂಗಳೆಯರು ಮುಡಿಯಲು ಸಹಾ ಬಳಸುತ್ತಾರೆ. ಆದರೆ, ಡೇರೆ ಪ್ರಮುಖವಾಗಿ ಬಳಕೆಯಾಗುವುದು ವಿವಿಧ ಕಾರ್ಯಕ್ರಮಗಳಲ್ಲಿನ ಅಲಂಕಾರಕ್ಕಾಗಿ. ಮದುವೆ ಸೇರಿದಂತೆ, ಧಾರ್ಮಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅಲಂಕಾರಕ್ಕೆ ಡೇರೆಯನ್ನು ಬಳಸಲಾಗುತ್ತದೆ. ಆಕರ್ಷಕ ರಂಗುಗಳು ಹಾಗೂ ಗಾತ್ರದ ಕಾರಣದಿಂದಾಗಿ ಅಲಂಕಾರಿಕ ಪ್ರಕ್ರಿಯೆಗಳಿಗೆ ಡೇರೆ ಹೆಚ್ಚು ಒದಗಿಬರುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಡೇರೆಗೆ ವಾಣಿಜ್ಯದ ಆಯಾಮವೂ ಸೇರಿಕೊಂಡಿದೆ. ಹಾಗಾಗಿ ಡೇರೆಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುವ ಪ್ರಯತ್ನಗಳೂ ನಡೆದಿವೆ. ಹೀಗೆ ಬೆಳೆದ ಡೇರೆ ಹೂಗಳಿಗೆ ಪೇಟೆಗಳಲ್ಲಿ ಒಳ್ಳೆಯ ಬೇಡಿಕೆಯಿದೆ.



ಮಳೆಗಾಲ ಈಗ ಚಾಲ್ತಿಯಲ್ಲಿದೆ. ನಿಮ್ಮ ಮನೆಯಂಗಳದಲ್ಲೂ ಒಂದು ಡೇರೆಯ ಗಿಡ ನೆಡಿ. ಗಿಡಗಳನ್ನು ಮಾರುವ ನರ್ಸರಿಗಳಲ್ಲಿ ಪುಟಾಣಿ ಗಿಡಗಳು ಲಭ್ಯ. ಕೈತೋಟದ ಮಣ್ಣಿನಲ್ಲಿ ಇಲ್ಲವೇ ಕುಂಡಗಳಲ್ಲೂ ಬೆಳೆಸಬಹುದಾದ ಅಲಂಕಾರಿಕ ಗಿಡವಿದು. ■